ಮುಂದಾದ. ಮೀರ್ ಮೊಹಮ್ಮದ್ ಮೊಮಿನ್ ಎಂಬ ತಂತ್ರಜ್ಞ ನಗರದ ನಕ್ಷೆ ಸಿದ್ಧಪಡಿಸಿದ. ಕ್ರಿ.ಶ. 1591ರಲ್ಲಿ ಮೊಹರಂ ಮುಗಿದು ಹತ್ತು ದಿನಗಳ ನಂತರ ಮೊಹಮ್ಮದ್ ಕೂಲಿ ಹೊಸ ನಗರ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ, ಅಡಿಗಲ್ಲು ಹಾಕಿದ ನಂತರ ಈಗಿನ 'ಪ್ರಭು'ಗಳಂತೆ ಆತ ಸುಮ್ಮನೇ ಕೂಡಲಿಲ್ಲ. ತಂತ್ರಜ್ಞರು, ವಿನ್ಯಾಸಗಾರರು ಹಾಗೂ ಕೆಲಸಗಾರರನ್ನು ಆತ ನೇಮಕ ಮಾಡಿಕೊಂಡ.

ನಾಲ್ಕೂ ದಿಕ್ಕುಗಳಿಗೆ ಸಂಪರ್ಕ ಕಲ್ಪಿಸುವಂತಹ ನಾಲ್ಕು ವಿಶಾಲ ರಸ್ತೆಗಳು, ಪ್ರತಿ ರಸ್ತೆಗೊಂದು ಕಮಾನು, 14000 ಅಂಗಡಿಗಳು, 12000 ಮೊಹಲ್ಲಾಗಳು ನವನಗರದಲ್ಲಿ ಇರಬೇಕು ಎಂಬುದು ಕೂಲಿಯ ಕಲ್ಪನೆ ಆಗಿತ್ತು. ಜಗತ್ತಿನ ಯಾವ ಭಾಗದಲ್ಲೂ ಇರದಂತಹ ವ್ಯವಸ್ಥಿತ ನಗರ ನಿರ್ಮಾಣ ಆತನ ಕನಸಾಗಿತ್ತು. ಆದ್ದರಿಂದಲೇ ಆತ ಅಲ್ಲಾನನ್ನು ಹೀಗೆ ಪ್ರಾರ್ಥಿಸುತ್ತಿದ್ದನಂತೆ: 'ಮೀನುಗಳಿಗೆ ನೀನು ಸಾಗರವನ್ನು ನಿರ್ಮಾಣ ಮಾಡಿರುವೆಯಲ್ಲ; ಹಾಗೆಯೇ ನನ್ನ ಜನಗಳಿಗಾಗಿ ಹೊಸ ನಗರವನ್ನು ನಿರ್ಮಾಣ ಮಾಡುವ ಶಕ್ತಿ ಕೊಡು'!

ನಗರಕ್ಕೆ ಕಳಸಪ್ರಾಯವಾದ ಚಾರ್‌ಮಿನಾರ್ ನಿರ್ಮಾಣ ಶುರುವಾದದ್ದು ಕ್ರಿ.ಶ. 1591ರಲ್ಲಿ. ಒಂದು ವರ್ಷದಲ್ಲಿ ಕಟ್ಟಡ ಪೂರ್ಣಗೊಂಡಿತು. ಎರಡು ಲಕ್ಷ ಬಂಗಾರದ ಹಾನ್‌ಗಳನ್ನು ಈ ಕಟ್ಟಡಕ್ಕಾಗಿ ವ್ಯಯಿಸಲಾಯಿತು. ನಾಲ್ಕೂ ದಿಕ್ಕಿನಿಂದ ಬರುವ ರಸ್ತೆಗಳು ಚಾರ್‌ಮಿನಾರ್ ಬಳಿ ಸಂಧಿಸುತ್ತವೆ. ಮೆಕ್ಕಾದ ಹಜರತ್ ಇಮಾಮ್ ರೋಜಾದ ತದ್ರೂಪದಂತಿರುವ ಚಾರ್‌ಮಿನಾರ್ ಮೊಹಮ್ಮದ್ ಕೂಲಿಯ ಅಪೂರ್ವ ಕಲ್ಪನೆಯ ದ್ಯೋತಕವಾಗಿದೆ. ಇಡೀ ನಗರದ ನಿರ್ಮಾಣಕ್ಕೆ ಆಗಿನ ದಿನಗಳಲ್ಲಿ ಎರಡು ಕೋಟಿ ರೂಪಾಯಿ (70 ಲಕ್ಷ ಹಾನ್‌ಗಳು) ಖರ್ಚು ಮಾಡಲಾಯಿತು ಎಂದು ನಜೀರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಮೀರ್ ಅಬು ತಾಲೀಬ್ ಅಂದಾಜು ಪಟ್ಟಿ ಸಿದ್ಧಪಡಿಸಿದ್ದ.

ಚಾರ್‌ಮಿನಾರ್‌ಗೆ 60 ಅಡಿ ವರ್ಗಾಕಾರದ ಬುನಾದಿ ಇದೆ. 60 ಅಡಿ ಎತ್ತರ ಹಾಗೂ 36 ಅಡಿ ಅಗಲದ ನಾಲ್ಕು ಕಮಾನುಗಳನ್ನು ಅದು ಹೊಂದಿದೆ. ಪ್ರತಿ ಕಮಾನಿನ ಮೇಲೆ ಒಂದೊಂದು ಗೋಪುರವಿದ್ದು ಟೆರೆಸ್ ಮೇಲಿಂದ 80 ಅಡಿ ಎತ್ತರಕ್ಕೆ ಅವು ಚಾಚಿಕೊಂಡಿವೆ. ಗೋಪುರಕ್ಕೆ ಹೋಗಲು 146 ಪಾವಟಿಗೆಗಳಿವೆ. ಟೆರೆಸ್ ಮೇಲೆ ಪಶ್ಚಿಮ ಗೋಪುರದ ಬಳಿ ಒಂದು ಮಸೀದಿ ಇದೆ. ಚಾರ್‌ಮಿನಾರ್ ಬಳಿಯೇ ಜಾಮಾ ಮಸೀದಿಯನ್ನು ನಿರ್ಮಿಸಲಾಯಿತು. ಮೊಹಮ್ಮದ್ ಕೂಲಿ ಕದ್ದುಮುಚ್ಚಿ ಬಂದು ಭಾಗಮತಿಯನ್ನು ಭೇಟಿಯಾಗುತ್ತಿದ್ದ ಜಾಗದಲ್ಲೇ ಚಾರ್‌ಮಿನಾರ್ ಸ್ಥಾಪನೆ ಮಾಡಲಾಗಿದ್ದು, ಅಲ್ಲಿಯೇ ಚುಚ್ಲುಂ ಹಳ್ಳಿ ಇತ್ತು ಎಂಬ ಐತಿಹಾಸಿಕ ಮಾಹಿತಿ ಇದೆ.

ಹೊಸ ನಗರ ನಿರ್ಮಾಣವಾದ ನಂತರ ಆ ಊರಿಗೆ ಯಾವ ಹೆಸರನ್ನು ನಾಮಕರಣ ಮಾಡಬೇಕು ಎಂಬ ವಿಷಯವಾಗಿ ಮೊಹಮ್ಮದ್ ಕೂಲಿಗೆ ಯಾವುದೇ ಗೊಂದಲ ಇರಲಿಲ್ಲ. ತನ್ನ ಪ್ರೇಯಸಿ ಭಾಗಮತಿಯ ಹೆಸರು ಚಿರಸ್ಥಾಯಿಯಾಗಿ ನಿಲ್ಲಲು ಹೊಸನಗರಕ್ಕೆ ಆತ ಭಾಗ್ಯನಗರ ಎಂದು ಕರೆದ. ಭಾಗಮತಿ ಮುಂದೆ ಮದುವೆಯಾಗಿ ಕೂಲಿಯ ಪಟ್ಟದರಸಿಯಾದಾಗ ಅವಳ ಹೆಸರು ಹೈದರ್ ಮಹಲ್ ಎಂದು ಬದಲಾಯಿತು. ಅಂತೆಯೇ ನಗರದ ಹೆಸರು ಭಾಗ್ಯನಗರ ಹೋಗಿ ಹೈದರಾಬಾದ್ ಆಯಿತು. ಇಬ್ಬರ ಅಮರ ಪ್ರೇಮಕ್ಕೆ ನಿತ್ಯಸಾಕ್ಷಿಯಾಗಿ ನಿಂತಿತು.

ಮೊಹಮ್ಮದ್ ಕೂಲಿ ಪೂರ್ವಜರು ತುರ್ಕಿಸ್ತಾನದಿಂದ ಬಂದವರು. ಬಹಮನಿ ಸಾಮ್ರಾಜ್ಯದ ಆಶ್ರಯ ಪಡೆದಿದ್ದ ಮೊಹಮ್ಮದ್ ಮುತ್ತಾತ ಅದನ್ ಕೂಲಿ ತನ್ನ ಶೌರ್ಯ ಸಾಹಸಕ್ಕೆ ಹೆಸರು ಮಾಡಿದ್ದ. ಆತನನ್ನು 150 ಅರಬ್ ಕುದುರೆ ನೀಡಿ ಬಹಮನಿ ಸುಲ್ತಾನ ಸನ್ಮಾನಿಸಿದ್ದ. ಮುಂದೆ ವಾರಂಗಲ್, ಗೋಲ್ಕಂಡ ಮತ್ತು ಕೊಡಂಗಲ್ ಭಾಗಗಳನ್ನು ಒಳಗೊಂಡ ತೆಲಂಗಾಣದ ಸುಬೇದಾರನನ್ನಾಗಿ ಅದನ್ ಕೂಲಿಯನ್ನು ನೇಮಕ ಮಾಡಲಾಗಿತ್ತು. ಕ್ರಿ.ಶ. 1512ರಲ್ಲಿ ಬೀದರಿನ ಬಹಮನಿ ಸಾಮ್ರಾಜ್ಯದ ಮೊಹಮ್ಮದ್ ಶಾ ಮರಣ ಹೊಂದಿದಾಗ ಸುಲ್ತಾನ್ ಕೂಲಿ ತನ್ನನ್ನು ತಾನು ಸ್ವತಂತ್ರ ಎಂದು ಘೋಷಿಸಿಕೊಂಡ. ಗೋಲ್ಕಂಡ ರಾಜ್ಯ ಸ್ಥಾಪನೆಯಾದ ಬಗೆಯಿದು.

ಭಾಗಮತಿಯನ್ನು ತನ್ನ ಪಟ್ಟದರಸಿಯಾಗಿ ಹೊಂದಿದ್ದ ಮೊಹಮ್ಮದ್ ಕೂಲಿ ಆಕೆಯನ್ನು ಕೊನೆಯವರೆಗೂ ಅಷ್ಟೇ ಅಕ್ಕರೆಯಿಂದ ನೋಡಿಕೊಂಡ. ಆದ್ದರಿಂದಲೇ ಇದು ದಕ್ಷಿಣದ ಜೋಧಾ–ಅಕ್ಬರ್ ಕಥೆ! ಕಾಕತಾಳೀಯ ಎಂಬಂತೆ ಅಕ್ಬರ್ ಪ್ರೇಮ ಪ್ರಕರಣ ನಡೆದಿದ್ದು ಇದೇ ಅವಧಿಯಲ್ಲಿ! ಅಕ್ಬರ್ ಹಾಗೂ ಮೊಹಮ್ಮದ್ ಕೂಲಿ ನಡುವೆ ಸಂಪರ್ಕ ಇತ್ತು ಎಂಬುದಕ್ಕೆ ಹಲವು ಪುರಾವೆಗಳೂ ಇವೆ. ನಮ್ಮ ಜೋಧಾ ಅಕ್ಬರ್ ಕಥೆ ಉತ್ತರದ ಕಥೆಗಿಂತ ರೋಚಕ ಮಾತ್ರವಲ್ಲ; ವಿಭಿನ್ನವಾದುದೂ ಹೌದು!





ಪ್ರೇಮಿಗಳ ಸಮಾಗಮ: ಭಾಗಮತಿ ಮತ್ತು ಮೊಹಮ್ಮದ್ ಕೂಲಿ ಪರಸ್ಪರ ಕಣ್ಣುಗಳು ಬೆರೆತ ಮಧುರ ಕ್ಷಣಗಳನ್ನು ಕಲಾವಿದ ಹೀಗೆ ದಾಖಲಿಸಿದ್ದಾನೆ.

## ಅಪರೂಪದ ಇತಿಹಾಸಕಾರ

1980ರ ದಶಕದ ಸುಧಾ ಓದುಗರಿಗೆ ಇತಿಹಾಸಕಾರ ಲಕ್ಷ್ಮಣ ಆಳವಂಡಿ (ಎಲ್.ಎಸ್. ಪಾಟೀಲ) ಅವರದ್ದು ಚಿರಪರಿಚಿತವಾದ ಹೆಸರು. ಇವರು ನಿಯಮಿತವಾಗಿ ಪತ್ರಿಕೆಗೆ ಐತಿಹಾಸಿಕ ಲೇಖನಗಳ ಜತೆ ಶಿಶುಗೀತೆ ಹಾಗೂ ಕಥೆಗಳನ್ನೂ ಬರೆದಿದ್ದರು. ಅದು ಹೈದರಾಬಾದ್–ಕರ್ನಾಟಕದ ಇತಿಹಾಸ ಇರಲಿ, ನಿಜಾಮರ ಪೂರ್ವಾಪರ ಇರಲಿ, ರಾಯಚೂರು ಭಾಗದ ಸ್ವಾತಂತ್ರ್ಯ ಹೋರಾಟದ ಚರಿತ್ರೆ ಇರಲಿ, ಪಾಟೀಲರು ಹೇಳಿದ್ದೇ ಫೈನಲ್. ಏಕೆಂದರೆ, ಹೈ–ಕ ಇತಿಹಾಸದ ಗೆಜೆಟಿಯರ್ ಆಗಿದ್ದರು ಅವರು.

ಹುಟ್ಟೂರು ಕೊಪ್ಪಳ ತಾಲ್ಲೂಕು ಆಳವಂಡಿ ಮೇಲೆ ಅವರಿಗೆ ಎಲ್ಲಿಲ್ಲದ ಪ್ರೇಮ. ಸ್ವಾತಂತ್ರ್ಯ ಹೋರಾಟಗಾರ ಶಿವಮೂರ್ತಿಸ್ವಾಮಿಯರು, ಆಳವಂಡಿಯಲ್ಲಿ ವಿದ್ಯಾಸಂಸ್ಥೆ ಆರಂಭಿಸಿದಾಗ ಮೊದಲು ಕರೆದು ಕೆಲಸ ಕೊಟ್ಟಿದ್ದು ಪಾಟೀಲರಿಗೇ. ಅದೇ ಸಿದ್ದೇಶ್ವರ ಕಾಲೇಜಿನಲ್ಲಿ 35 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ಲಕ್ಷ್ಮಣ, ಹುಟ್ಟೂರು ಬಿಟ್ಟು ಹೋಗಬಾರದು ಎಂದು ತಾವೇ ಹಾಕಿಕೊಂಡಿದ್ದ ಲಕ್ಷ್ಮಣ ರೇಖೆಯನ್ನು ಎಂದೂ ದಾಟಲಿಲ್ಲ. ಈಚೆಗಷ್ಟೇ ನಿಧನರಾದ ಈ ಹಿರಿಯ ಇತಿಹಾಸಕಾರರು ತಮ್ಮ ಜೀವಿತಾವಧಿಯಲ್ಲಿ ಬರೆದ ಕೊನೆಯ ಲೇಖನವಿದು.